

ತಾನು ಬರೆದದ್ದು ತನಗೇ ಅರ್ಥವಾಗಲಿಲ್ಲ. ಛೆ! ಎಂಥ ಕೆಲಸವಾಯಿತಲ್ಲ ಎಂದು ಹಲುಬಿ ಮತ್ತೆ ನಿದ್ದೆಗೆ ಜಾರಿದವನಿಗೆ ಮತ್ತದೇ ಕನಸು ಬೀಳಬೇಕೆ?. ಕನಸು ಈ ಸಲ ಕೈಕೊಡಲಿಲ್ಲ. ಲೆವಿಯ ಪಾಲಿನ ಕಾಮಧೇನುವಾಗಿತ್ತು. 1921ರಲ್ಲಿ ಲೆವಿ, ಮನುಷ್ಯನ ನರವ್ಯೂಹದಾದ್ಯಂತ ಸಂದೇಶಗಳು ರಾಸಾಯನಿಕವಾಗಿ ಒಂದೆಡೆಯಿಂದ ಇನ್ನೊಂದೆಡೆಗೆ ಚಲಿಸುತ್ತವೆ ಎಂದು ವೈಜ್ಞಾನಿಕವಾಗಿ ನಿರೂಪಿಸುವ ಸುದೀರ್ಘ ಲೇಖನವೊಂದನ್ನು ಪ್ರಕಟಿಸಿದ. ಆ ಲೇಖನದ ತಳಹದಿಯ ಮೇಲೆ ಇಂದಿನ ನ್ಯೂರೊ ಸೈನ್ಸ್ ಅಥವಾ ನರಮಂಡಲ ವಿಜ್ಞಾನ ನೆಲೆನಿಂತಿದೆ! 1936ರಲ್ಲಿ ಲೆವಿಗೆ ಇದೇ ಸಂಶೋಧನೆಗಾಗಿ ನೊಬೆಲ್ ಬಹುಮಾನ ಬಂತು.

## ಗೂಗಲ್‌ನ ಜನನ ಕನಸಿನಲ್ಲಿ!

ಇಂದು ನಾವೆಲ್ಲ ವ್ಯಾಪಕವಾಗಿ ಬಳಸುತ್ತಿರುವ 'ಗೂಗಲ್ ಸರ್ಚ್ ಎಂಜಿನ್' ಜೀವತಳೆದದ್ದು ಕನಸಿನ ಮುಖಾಂತರ ಎಂದು ಅದನ್ನು ನಿರ್ಮಿಸಿದ ಲ್ಯಾರಿ ಪೇಜ್ ಸ್ವತಃ ಹೇಳಿದ್ದಾನೆ.

ಮಾಹಿತಿ ಹುಡುಕಾಟಕ್ಕೆ ಬೇಕಾದ ಹುಡುಕುಯಂತ್ರದ ಅಲ್ಗೊರಿದಂನ (ಕ್ರಮಾವಳಿಯ) ಹೊಳಹು ಸಿಕ್ಕಿದು ಬೆಳಗಿನ ಜಾವದ ಕನಸಿನಲ್ಲಿ. ಎಷ್ಟೇ ತಲೆ ಕೆಡಿಸಿಕೊಂಡರೂ ನಿಖರವಾಗಿ ತಲೆಗೆ ಬಾರದಿದ್ದ ಕ್ರಮಾವಳಿ ಮನಸ್ಸಿನ ಪರದೆಯ ಮೇಲೆ ಮೂಡಿ ಮರೆಯಾದ ತಕ್ಷಣ ಎಚ್ಚರಗೊಂಡ ಲ್ಯಾರಿ ಅವಸರವಸರವಾಗಿ ಅದನ್ನು ಹಾಳೆಯೊಂದರ ಮೇಲೆ ಬರೆದಿಟ್ಟುಕೊಂಡನಂತೆ. ಅದೇ ಕ್ರಮಾವಳಿಯನ್ನು ಈಗ ನಾವೆಲ್ಲ ಬಳಸುತ್ತಿರುವ ಗೂಗಲ್ ಸರ್ಚ್ ಎಂಜಿನ್‌ನಲ್ಲಿ ಬಳಸಲಾಗಿದೆಯಂತೆ.

ಮೇಲಿನ ನಿದರ್ಶನಗಳಷ್ಟೇ ಅಲ್ಲ, ಜಗತ್ತಿನ ಅತಿ ಹೆಸರುವಾಸಿ ನಾಯಕರಿಗೆ ಸಾವಿನ ಸುಳಿವು ಅವರಿಗೆ ಕನಸಿನಲ್ಲೇ ಸಿಕ್ಕಿತ್ತೆಂದು ಹೇಳಲಾಗುತ್ತದೆ. ರೋಮನ್ ರಾಜ ಕಲಿಗುಲ, ಅಮೆರಿಕದ ಅಧ್ಯಕ್ಷ ಅಬ್ರಹಾಂ ಲಿಂಕನ್, ಅಡಾಲ್ಫ್ ಹಿಟ್ಲರ್ ಇವರಿಗೆಲ್ಲ ತಮ್ಮ ಅವಸಾನದ ಕುರಿತು ಕನಸುಗಳು ಬಿದ್ದಿದ್ದವು. ನಂತರ ವಾಸ್ತವದಲ್ಲಿ ಅವು ನನಸೂ ಆದವು. ಹಾಗೆಯೇ ಪಾಲ್ ಮೆಕಾರ್ಟ್ನಿಯ ಅತಿ ಜನಪ್ರಿಯ ಹಾಡು 1965ರ 'ಎಸ್ಟರ್ಡೇ', ಸ್ಯಾಮುಯೆಲ್ ಕಾಲರಿಡ್ಜ್‌ನ 'ಕುಬ್ಲಾಯ್ ಖಾನ್', ಮೇರಿ ಶೆಲ್ಲಿಯ ಭಯಾನಕ ಕಥಾನಕ 'ಫ್ರಾಂಕನ್‌ಸ್ಟೈನ್', ಜ್ಯಾಕ್ ಕೆರೋಕ್‌ನ ಪ್ರಸಿದ್ಧ ಪುಸ್ತಕ 'ಬುಕ್ ಆಫ್ ಡ್ರೀಮ್ಸ್', ಸಾಲ್ವಡಾರ್ ಡಾಲಿಯ ವಿಶ್ವ ವಿಖ್ಯಾತ ಪೇಂಟಿಂಗ್‌ಗಳು, ವಿಶ್ವ ಪ್ರಸಿದ್ಧ ಮಕ್ಕಳ ಕಾಮಿಕ್ ಪುಸ್ತಕ 'ಟಿನ್‌ಟಿನ್ ಇನ್ ಟಿಬೆಟ್', ರಾಬರ್ಟ್ ಸ್ಟೀವನ್‌ಸನ್‌ನ 'ಡಾ. ಜೆಕಿಲ್ ಅಂಡ್ ಮಿ. ಹೈಡ್', ಆರ್ಗ್ಯಾನಿಕ್ ಕೆಮಿಸ್ಟ್ರಿಯ ಬೆಂಜೀನ್ ಮೂಲವಸ್ತುವಿನ ರಚನೆಗಳೆಲ್ಲ ಕನಸಿನಲ್ಲಿ ಕಂಡ ವಿಚಾರಗಳಿಂದಲೇ ರೂಪುಗೊಂಡಿವೆ ಎಂಬ ಮಾತುಗಳು ಸಂಶೋಧನಾರಂಗದಲ್ಲಿ ದಂತಕತೆಗಳ ರೂಪದಲ್ಲಿ ಆಗಾಗ ಪ್ರಸ್ತಾಪಗೊಳ್ಳುತ್ತಲೇ ಇರುತ್ತವೆ.

ಪ್ರತಿಕ್ರಿಯಿಸಿ: feedback@sudha.co.in

## ಶ್ರೀನಿವಾಸ ರಾಮಾನುಜನ್ ಮತ್ತು ನಾಮಗಿರಿತಾಯಿ!

ಭಾರತ ಕಂಡ ಶ್ರೇಷ್ಠ ಗಣಿತಜ್ಞರಲ್ಲಿ ಶ್ರೀನಿವಾಸ ರಾಮಾನುಜನ್ ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ. ಅಪಾರ ದೈವಭಕ್ತಿಯ ರಾಮಾನುಜನ್‌ಗೆ ಮನೆ ದೇವಿ ನಾಮಗಿರಿಯಮ್ಮ ಆಗಾಗ ಕನಸಿನಲ್ಲಿ ಬಂದು ಗಣಿತದ ಸಮಸ್ಯೆಗಳಿಗೆ ಉತ್ತರ ನೀಡುತ್ತಿದ್ದಳಂತೆ! ಇದನ್ನು ರಾಮಾನುಜನ್ ಅತೀಂದ್ರಿಯ ಅನುಭವ ಎನ್ನುತ್ತಿದ್ದರು.

'ನನಗೆ ವಿಚಿತ್ರ ಅನುಭವವಾಗುತ್ತಿತ್ತು, ಕೆಂಪು ಬಣ್ಣದ ರಕ್ತದ ತೆರೆಯೊಂದು ಗೋಡೆಯ ಮೇಲೆ ರಚನೆಯಾಗುತ್ತಿತ್ತು. ನಾನು ಅದನ್ನು ದಿಟ್ಟಿಸಿ ನೋಡುತ್ತಿದ್ದೆ. ಇದ್ದಕ್ಕಿದ್ದಂತೆ ಎಲ್ಲಿಂದಲೋ ಬಂದ ಕೈಯೊಂದು ಬರೆಯಲು ಪ್ರಾರಂಭಿಸುತ್ತಿತ್ತು. ಆಗ ನಾನು ಇನ್ನಷ್ಟು ಗಮನವಿಟ್ಟು ನೋಡುತ್ತಿದ್ದೆ. ಬರೆಯುತ್ತಿದ್ದ ಕೈಗಳಿಂದ ಮೂಡಿ ಬಂದ ಬರಹ ನನಗೆ ಅತ್ಯಾಶ್ಚರ್ಯ ಉಂಟು ಮಾಡಿತು. ಅದು ಬರೆದದ್ದು ಹತ್ತಾರು ಎಲಿಪ್ಟಿಕಲ್ ಇಂಟಿಗ್ರಲ್‌ಗಳನ್ನು. ನನಗೆ ಹೊಳೆಯದ ಎಷ್ಟೋ ಉತ್ತರಗಳು ಅಲ್ಲಿರುತ್ತಿದ್ದವು. ಕನಸಿನಿಂದ ಎಚ್ಚರವಾದ ತಕ್ಷಣ, ಅವುಗಳನ್ನೆಲ್ಲ ಹಾಳೆಯಲ್ಲಿ ಬರೆದಿಡುತ್ತಿದ್ದೆ' ಎಂದಿದ್ದರು. ಆಧುನಿಕ ಅನ್ವಯಿಕ ಗಣಿತದ ಬಹುಮುಖ್ಯ ಸಮಸ್ಯೆಗಳಿಗೆ ರಾಮಾನುಜನ್‌ಗೆ ಕನಸಿನ ಮೂಲಕ ಉತ್ತರ ದೊರೆಯುತ್ತಿತ್ತಂತೆ! ರಾಮಾನುಜನ್ ಕಾಲಕ್ಕೆ 'ಎಲಿಪ್ಟಿಕಲ್ ಇಂಟಿಗ್ರಲ್ ಕ್ಯಾಲ್ಕುಲಸ್' (ಕಲನಶಾಸ್ತ್ರ) ಬಹು ಸಂಕೀರ್ಣ ವಿಷಯವಾಗಿತ್ತು. ಆಧುನಿಕ ಗಣಿತದ ಅನೇಕ ಸಾಧ್ಯತೆಗಳ ಬಗ್ಗೆ ಕೆಲಸ ಮಾಡಿದ್ದ ರಾಮಾನುಜನ್‌ರ ಕೊಡುಗೆಯಲ್ಲಿ ಎಲಿಪ್ಟಿಕಲ್ ಇಂಟಿಗ್ರಲ್‌ಗಳಿಗೆ ಭಾರೀ ಮಹತ್ವವಿದೆ.